ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: 14 ಗೃಹ - ಸಿ ಡಿ ಪ್ರಕರಣ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 30/3/2021

# 'ನಮ್ಮ ಪುತ್ರಿ ನೇರವಾಗಿ ಜಡ್ಜ್ ಬಳಿ ಹೋಗುವುದು ಬೇಡ'

ಉವಾ 30/3/21

ಬೆಳಗಾವಿ: ಮಾನಸಿಕ ಒತ್ತಡದಲ್ಲಿರುವ ನಮ್ಮ ಪುತ್ರಿಗೆ ಕೌನ್ಸೆಲಿಂಗ್ ಅಗತ್ಯವಿದ್ದು ನೇರವಾಗಿ ನ್ಯಾಯಾಧೀಶರ ಎದುರು ಹಾಜರಾಗುವುದು ಬೇಡ ಎಂದು ಸಂತ್ರಸ್ತೆಗೆ ಪೋಷಕರು ಮನವಿ ಮಾಡಿದರು. ನಗರದ ತಮ್ಮ ಮನೆಯಲ್ಲಿ ಸೋಮವಾರ ಸುದ್ದಿಗಾರರ ಜತೆ ಮಾತನಾಡಿ, ಸುಮಾರು 25 ದಿನಗಳಿಂದ ನನ್ನ ಪುತ್ರಿಯನ್ನು ಡಿ.ಕೆ.ಶಿವಕುಮಾರ ಅವರ ಹಿಂಬಾಲಕರು ಒತ್ತೆಯಾಳಾಗಿ ಇಟ್ಟುಕೊಂಡಿದ್ದಾರೆ. ಪುತ್ರಿ ಮೇಲೆ ಒತ್ತಡ ಹಾಕಿ ಏನೇನೋ ಮಾತನಾಡಿಸುತ್ತಿದ್ದಾರೆ. ಹೀಗಾಗಿ ಆಕೆ ನೇರವಾಗಿ ನ್ಯಾಯಾಧೀಶರ ಎದುರು ಹಾಜರಾಗುವುದು ಬೇಡ. ಒಂದು ವೇಳೆ ಪುತ್ರಿ ನ್ಯಾಯಾಧೀಶರ ಎದುರು ಹಾಜರಾದರೆ ಡಿಕೆಶಿ ಹೇಳಿಕೊಟ್ಟಂತೆ ಹೇಳುತ್ತಾಳೆ. ನ್ಯಾಯಾಧೀಶರು ಆಕೆಯ ಹೇಳಿಕೆ ಪಡೆಯದೆ ನಾಲ್ಕು ದಿನ ನಮ್ಮ ಕಡೆಗೆ ಒಪ್ಪಿಸಬೇಕು. ಆಕೆ ಒತ್ತಡದಿಂದ ಹೊರಬಂದ ನಂತರ ನಾವೇ ಆಕೆಯನ್ನು ನ್ಯಾಯಾಧೀಶರ ಎದುರು ಹಾಜರುಪಡಿಸುತ್ತೇವೆ. ಇಲ್ಲವಾದರೆ ನ್ಯಾಯಾಲಯವೇ ಆಕೆಗೆ ಕೌನ್ಸೆಲಿಂಗ್ ಮಾಡಬೇಕು ಎಂದರು. ನಾಲ್ಕು ದಿನ ವಿಶ್ರಾಂತಿ ನೀಡಿ ಒತ್ತಡದಿಂದ ಆಕೆಯನ್ನು ಹೊರತರಬೇಕು. ಅಂದಾಗಲೇ ಒತ್ತಡದಿಂದ ಆಕೆ ಹೊರಬಂದು ಸತ್ಯಾಸತ್ಯತೆ ಹೇಳಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಆಕೆ ಒತ್ತಡದ ಮೇಲೆ ಸುಳ್ಳು ಹೇಳಬಹುದು. ಅನ್ಯಾಯವಾಗಿದ್ದನ್ನು ಹೇಳಲು ಆಕೆಗೆ ನಮ್ಮ ವಿರೋಧವಿಲ್ಲ. ದೇಶವನ್ನೇ ಕಾಪಾಡಿದ ನನಗೆ ನನ್ನ ಪುತ್ರಿಯನ್ನು ಕಾಪಾಡುವುದು ಸಮಸ್ಯೆಯಲ್ಲ. ರಾಜಕಾರಣಿಗಳು ನನ್ನ ಪುತ್ರಿಯನ್ನು ತಮಗೆ ಬೇಕಾದಂತೆ ಬಳಸಿಕೊಳ್ಳುತ್ತಿದ್ದಾರೆ. ದಯವಿಟ್ಟು ರಾಜಕಾರಣಿಗಳು ನನ್ನ ಪುತ್ರಿಯನ್ನು ನಮ್ಮ ಕುಟುಂಬಕ್ಕೆ ಒಪ್ಪಿಸಬೇಕು ಎಂದು ಯುವತಿಯ ತಂದೆ ಹೇಳಿದರು. ಆಕೆ ಬೆಂಗಳೂರಲ್ಲಿ ಕೆಲಸ ಮಾಡುತ್ತಿದ್ದಳು. ದೊಡ್ಡ ಪುತ್ರನೂ ಬೆಂಗಳೂರಲ್ಲಿದ್ದ. ಇಬ್ಬರೂ ಜತೆಯಾಗಿದ್ದರು. ಆಕೆಯ ಸ್ನೇಹಿತ ಆಕಾಶ ಬಿಟ್ಟರೆ ಉಳಿದವರ ಪರಿಚಯ ನಮಗಿಲ್ಲ. ಆಕಾಶ ಎರಡು ತಿಂಗಳ ಹಿಂದಷ್ಟೇ ಪರಿಚಯವಾಗಿದ್ದ. ಡಿಕೆಶಿ ಹಿಂಬಾಲಕರು ಹಣ ನೀಡಿ ಆಕೆಯ ಮೊಬೈಲ್ ವಶಪಡಿಸಿಕೊಂಡಿದ್ದಾರೆ. ಸಿಡಿ ಬಿಡುಗಡೆ ಆದ ತಕ್ಷಣವೇ ಆಕೆಯನ್ನು ಡಿಕೆಶಿಯೇ ಗೋವಾಕ್ಕೆ ಕಳುಹಿಸಿದ್ದಾರೆ ಎಂದರು.